**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 17–01–2019**

# ಪತ್ರಿಕಾ ಆಮಂತ್ರಣ

1. ಕಿದ್ವಾಯಿ ಸ್ಮಾರಕ ಗಂಧಿ ಸಂಸ್ಥೆಯಿಂದ ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್ (ಅಸ್ಥಿ ಮಜ್ಜೆ) ಘಟಕ ಕಟ್ಟಡದ ಶಿಲಾನ್ಯಾಸ.

**ಉದ್ಘಾಟನೆ:**

ಹೆಚ್.ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು.

ಇ. ತುಕಾರಾಂ,
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಕೆಎಂಐಒ.

ಉದಯ ಗರುಡಾಚಾರ್,
ಶಾಸಕರು, ಚಿಕ್ಕಪೇಟೆ ಕ್ಷೇತ್ರ.

ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ,
ಮಹಾಪಾರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ

ದಿನಾಂಕ: 18–01–2019, ಶುಕ್ರವಾರ, ಸಮಯ: ಬೆಳಿಗ್ಗೆ 9–00 ಗಂಟೆಗೆ.

ಸ್ಥಳ: ಕಿದ್ವಾಯಿ ಸಂಸ್ಥೆಯ ಆವರಣ, ಡಾ. ಎಂ.ಹೆಚ್. ಮರಿಗೌಡರಸ್ತೆ,
ಬೆಂಗಳೂರು–560 029.

2. ಸಾವಯವ ಮತ್ತು ಸಿರಿಧಾನ್ಯಗಳು 2019 ಅಂತರರಾಷ್ಟ್ರೀಯ ವಾಣಿಜ್ಯ ಮೇಳ

<u>**ಉದ್ಘಾಟನೆ:**</u>

ಎಚ್. ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು

<u>**ವಸ್ತು ಪ್ರದರ್ಶನದ ಉದ್ಘಾಟನೆ:**</u>

ರಾಧಾ ಮೋಹನ್ ಸಿಂಗ್

ಕೃಷಿ ಮತ್ತು ರೈತರ ಕಲ್ಯಾಣ ಸಚಿವರು, ಭಾರತ ಸರ್ಕಾರ

<u>**"ಸಿರಿಧಾನ್ಯಗಳ ಪಾಕವಿಧಾನ" ಪುಸ್ತಕದ ಬಿಡುಗಡೆ:**</u>

ಡಿ ವಿ ಸದಾನಂದ ಗೌಡ

ಕೇಂದ್ರದ ಅಂಕಿ-ಅಂಶ ಮತ್ತು ಯೋಜನಾ ಅನುಷ್ಠಾನ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು

<u>**ಆಹಾರ ಮೇಳ ಉದ್ಘಾಟನೆ:**</u>

ಸುರೇಶ್ ಪ್ರಭು, ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಸಚಿವರು.

<u>**ಕರ್ನಾಟಕ ಪೆವಿಲಿಯನ್ ಉದ್ಘಾಟನೆ:**</u>

ಕೃಷ್ಣ ಭೈರೇಗೌಡ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

<u>**ಉಪಸ್ಥಿತಿ: ಸಚಿವರುಗಳಾದ**</u>

ಎನ್. ಎಚ್. ಶಿವಶಂಕರ ರೆಡ್ಡಿ,

ಎಮ್.ಸಿ. ಮನಗುಳಿ,

ವೆಂಕಟರಾವ್ ನಾಡಗೌಡ.

<u>**ಅಧ್ಯಕ್ಷತೆ:**</u>

ಡಾ.ಅಶ್ವತ್ಥ ನಾರಾಯಣ ಸಿ ಎನ್

ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ.

ದಿನಾಂಕ: 18-01-2019, ಶುಕ್ರವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ.

ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ , ಮೇಖ್ರಿ ಸರ್ಕಲ್, ಬೆಂಗಳೂರು.

## ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಅಬಕಾರಿ ಇಲಾಖೆಯಲ್ಲಿನ ಅಬಕಾರಿ ರಕ್ಷಕರು (ಮಹಿಳೆ) 51 ಹುದ್ದೆಗಳಿಗೆ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ: 14-01-2019 ರಂದು ಆಯೋಗದ ಅಂತರ್ಜಾಲ ತಾಣದಲ್ಲಿ http://kpsc.kar.nic.in "ಪಟ್ಟಿಗಳು/ಆಯ್ಕೆಪಟ್ಟಿ/ಅಂತಿಮ ಪಟ್ಟಿ" ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಸಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

## " ರಸ್ತೆ ಸುರಕ್ಷತಾ ಸಪ್ತಾಹ " ಜಾಗೃತಿ ಕಾರ್ಯಕ್ರಮ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹವನ್ನು ಫೆಬ್ರವರಿ 4 ರಿಂದ 10 ರವರೆಗೆ "Sadak Suraksha-Jeevan Raksha" ಎಂಬ ಧ್ಯೇಯದೊಡನೆ ಆಚರಿಸಲಾಗುತ್ತಿದೆ. ಕೇಂದ್ರ ಸರ್ಕಾರವು ನೀಡಿರುವ ಸೂಚನೆಯಂತೆ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳನ್ನು ಈ ಅವಧಿಯಲ್ಲಿ ಹಮ್ಮಿಕೊಳ್ಳುವ ಮೂಲಕ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಗುತ್ತಿದೆ.

ಆದ್ದರಿಂದ ಎಲ್ಲಾ ವಾಹನಗಳ ಮಾಲೀಕರು/ಚಾಲಕರು ವಾಹನಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಮತ್ತು ಮೇಲ್ಕಂಡ ಅವಧಿಯಲ್ಲಿ 30ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹವನ್ನು "Sadak Suraksha-Jeevan Raksha" ಎಂಬ ಧ್ಯೇಯದೊಂದಿಗೆ ಯಶಸ್ವಿಯಾಗಿ ಆಚರಣೆ ಮಾಡಲಾಗುತ್ತಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನವರಿ 18 ರಿಂದ 20 ರವರೆಗೆ

### ಸಾವಯವ ಮತ್ತು ಸಿರಿಧಾನ್ಯಗಳು – 2019 ಅಂತರರಾಷ್ಟ್ರೀಯ ವಾಣಿಜ್ಯ ಮೇಳ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ಜನವರಿ 18 ರಿಂದ 20 ರವರೆಗೆ ಮೂರು ದಿನಗಳ ಕಾಲ ಬೆಂಗಳೂರು ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಸಾವಯವ ಮತ್ತು ಸಿರಿಧಾನ್ಯಗಳು – 2019 ಅಂತರರಾಷ್ಟ್ರೀಯ ವಾಣಿಜ್ಯ ಮೇಳವನ್ನು ಕೃಷಿ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಎನ್.ಎಚ್. ಶಿವಶಂಕರ ರೆಡ್ಡಿ ಅವರು ತಿಳಿಸಿದರು.

ಅವರು ಇಂದು ತ್ರಿಪುರವಾಸಿನಿಯಲ್ಲಿ ಈ ಕುರಿತು ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಸಾವಯವ ಕೃಷಿ ಉತ್ಪನ್ನಗಳ ಬಗೆಗೆ ಜನರಿಗೆ ವಿಶೇಷ ಅರಿವು ಮೂಡಿಸಲು ಹಾಗೂ ರೈತರ ಸಿರಿಧಾನ್ಯ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು ಈ ಮೇಳ ಸಹಕಾರಿಯಾಗಲಿದೆ. ಸಿರಿಧಾನ್ಯಗಳ ಬಳಕೆಯಿಂದ ಆರೋಗ್ಯ ವೃದ್ಧಿಯಾಗುವುದಲ್ಲದೆ, ಮಧುಮೇಹ ರಕ್ತದೊತ್ತಡ ಮುಂತಾದ ರೋಗಗಳನ್ನು ತಡೆಗಟ್ಟಬಹುದು. ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ಸಹ ಸಿರಿಧಾನ್ಯಗಳನ್ನು ಬೆಳೆಯಬಹುದಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಸಹ ಈ ಮೇಳಕ್ಕೆ ಉತ್ತೇಜನ ನೀಡುತ್ತದೆ ಎಂದರು.

ಈ ಸಾವಯವ ಹಾಗೂ ಸಿರಿಧಾನ್ಯಗಳ ಮೇಳದಲ್ಲಿ ಈಗಾಗಲೇ 400 ಮಳಿಗೆಗಳು ಒಳಗೊಂಡಂತೆ, 220 ಪ್ರದರ್ಶಕರು, 23 ಆಹಾರ ಮಳಿಗೆಗಳು ಸೇರಿದಂತೆ ಒಟ್ಟಾರೆ 243 ಪ್ರದರ್ಶಕರು ಭಾಗವಹಿಸಲಿದ್ದಾರೆ.

ಅಲ್ಲದೆ, ಛತ್ತೀಸ್‌ಗಡ ಒಡಿಶಾ, ಉತ್ತಾರಕಾಂಡ್, ತಮಿಳುನಾಡು, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ಪಂಜಾಬ್, ಮಣಿಪುರ, ಕೇರಳ ತೆಲಂಗಾಣ ಮುಂತಾದ ರಾಜ್ಯಗಳು, ಅಂತರರಾಷ್ಟ್ರೀಯವಾಗಿ ಚಿಲಿ, ಪೊಲ್ಯಾಂಡ್, ಶ್ರೀಲಂಕಾ, ಜರ್ಮನಿ ಮುಂತಾದ ದೇಶಗಳು, 16 ನವ್ಯೋದ್ಯಮ ಸಂಸ್ಥೆಗಳು ಭಾಗವಹಿಸಲಿದೆ. ಈ ಮೇಳದಲ್ಲಿ 5 ಕೃಷಿ ಸಾವಯವ ಮತ್ತು ಸಿರಿಧಾನ್ಯ ಖಾದ್ಯಗಳ ಮಳಿಗೆಗಳು ಇರುತ್ತವೆ. ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಂದ ಆಗಮಿಸಲಿರುವ ಗಣ್ಯರು ಸಾವಯವ ಮತ್ತು ಸಿರಿಧಾನ್ಯಗಳು ಕುರಿತು ಗಹನವಾದ ಚರ್ಚೆಗಳನ್ನು ನಡೆಸಲಿದ್ದಾರೆ ಎಂದರು.

ಈ ಸಿರಿಧಾನ್ಯಗಳು ಕಡಿಮೆ ನೀರಿನಿಂದ ಕೀಟನಾಶಕ ಬಳಕೆಯಿಲ್ಲದೆ ಅತಿ ಕಡಿಮೆ ಅಥವಾ ರಾಸಾಯನಿಕ ಗೊಬ್ಬರ ರಹಿತವಾಗಿ ಬೆಳೆಯುತ್ತದೆ. ಈ ಹಿಂದೆ 2500 ಹೆಕ್ಟರ್‌ಗಳಷ್ಟಿದ್ದ ಸಾವಯವ ಕೃಷಿ ಕ್ಷೇತ್ರ ಇಂದು ಇಂದು ಲಕ್ಷ ಹೆಕ್ಟೇರ್ ತಲುಪಿದೆ. ರೈತರಿಗೆ ಪ್ರತಿ ಹೆಕ್ಟೇರಿಗೆ ರೂ 4000 ಪ್ರೋತ್ಸಾಹಧನ ಸಹ ನೀಡಲಾಗುತ್ತಿದೆ. ಮುಂದಿನ 3 ವರ್ಷಗಳಲ್ಲಿ ಸಾವಯವ ವಿಸ್ತೀರ್ಣ ಒಂದೂವರೆ ಲಕ್ಷ ಹೆಕ್ಟೇರಿಗೆ ಹೆಚ್ಚುವ ಗುರಿ ಹೊಂದಿದೆ ಎಂದರು.

ಸಾವಯವ ಮತ್ತು ಸಿರಿಧಾನ್ಯಗಳು – 2019 ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಭಾರತದಲ್ಲಿಯೇ ಅತಿ ದೊಡ್ಡ ಕಾರ್ಯಕ್ರಮವಾಗಿದ್ದು, ಸಾವಯವ ವಲಯ, ಸಿರಿಧಾನ್ಯ ಸಮುದಾಯದ ಸಮಾಗಮ. ಕಲಿಕೆ ಮತ್ತು ವ್ಯಾಪಾರಕ್ಕೆ ವೃತ್ತಿಪರ ವೇದಿಕೆ ಕಲ್ಪಿಸಲಿವೆ. ಈ ಮೇಳಕ್ಕೆ ಜ್ಞಾನ ಪಾಲುದಾರರಾದ ಇಕೋವಾ ಸಂಸ್ಥೆ ಸಹ ಕೈಜೋಡಿಸಲಿದೆ. ಈ ಮೇಳದಲ್ಲಿ ಪ್ರಮುಖವಾಗಿ ಬಿ2ಬಿ ಅಧಿವೇಶನಗಳನ್ನು ಎಲ್ಲಾ ಮೂರು ದಿನಗಳಂದು ಆಯೋಜಿಸಲಾಗಿದೆ. ಸುಮಾರು 100 ದೇಶೀಯ ಖರೀದಿದಾರರು ಸಭೆಗಳಲ್ಲಿ ನೋಂದಣಿ ಮಾಡಿಕೊಂಡಿದ್ದರೆ. 15 ಪ್ರದೇಶ ಒಕ್ಕೂಟಗಳು, ರೈತ ಉತ್ಪಾದಕ ಸಂಸ್ಥೆ, 85 ರೈತ ಗುಂಪುಗಳು ಭಾಗವಹಿಸಲಿದೆ. ರೈತರಿಗೆ ಪ್ರತ್ಯೇಕವಾಗಿ ಕನ್ನಡ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಈ ಮೇಳದಲ್ಲಿ ಸಿರಿಧಾನ್ಯಗಳಿಂದ ತಯಾರಾದ ಆಹಾರ ಉತ್ಪನ್ನಗಳ ತಯಾರಿಕೆ ಕುರಿತು ಸ್ಪರ್ಧೆ, ಮಕ್ಕಳಿಗಾಗಿ ಸಾವಯವ ಧಾನ್ಯಗಳ ಪ್ರಾಮುಖ್ಯತೆ ಕುರಿತು ಚಿತ್ರಕಲಾ ಸ್ಪರ್ಧೆ ಸಹ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಬಾರಿಯೂ ಬಜೆಟ್‌ನಲ್ಲಿ ಸಾವಯವ ಭಾಗ್ಯ ಯೋಜನೆಯಡಿ 50 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ನಗರ ಪ್ರದೇಶಗಳಲ್ಲಿ ಸಿರಿಧಾನ್ಯ ಉತ್ಪನ್ನಗಳ ನೂರಾರು ಮಳಿಗೆ ತೆರೆಯಲು ಉತ್ತೇಜಿಸಲಾಗುತ್ತಿದೆ.

ಮಕ್ಕಳ ಮಧ್ಯಾಹ್ನ ಬಿಸಿಯೂಟದಲ್ಲಿ ಸಹ ಸಿರಿಧಾನ್ಯಗಳನ್ನು ಸೇರಿಸಲು ಯೋಚಿಸಲಾಗಿದೆ. ಕ್ಯಾಂಟೀನ್, ಹಾಸ್ಟೆಲ್‌ಗಳಲ್ಲಿ ಸಹ ಇದರ ಅರಿವು ಮೂಡಿಸಿ ಖಾದ್ಯ ತಯಾರಿಸಲು ಉದ್ದೇಶಿಸಲಾಗಿದೆ. ಸಿರಿಧಾನ್ಯಗಳನ್ನು "ಸಿರಿ" ಎಂದು ಸಾವಯವ ಧಾನ್ಯಗಳನ್ನು "ಸೃಷ್ಠಿ" ಎಂಬ ಬ್ರ್ಯಾಂಡ್ ಹೆಸರಿನಲ್ಲಿ ನೋಂದಣಿ ಪ್ರಮಾಣೀಕರಣ ಮಾಡಿ ಜನರಿಗೆ ತಲುಪಿಸಲು ಕ್ರಮ ರೂಪಿಸಲಾಗುತ್ತಿದೆ ಎಂದರು.

ಜನವರಿ 18 ರಿಂದ 20 ರವರೆಗೆ ನಡೆಯುವ ಸಾವಯವ ಮತ್ತು ಸಿರಿಧಾನ್ಯಗಳ ಅಂತರರಾಷ್ಟ್ರೀಯ ವಾಣಿಜ್ಯ ಮೇಳ –2019 ಅನ್ನು ಶುಕ್ರವಾರ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ. ಜನವರಿ 19 ರಂದು ಸಂಜೆ 4–00 ಗಂಟೆಗೆ ಗ್ರಾಹಕ ಸಂಪರ್ಕ ಸಭೆ ಆಯೋಜಿಸಲಾಗಿದೆ. ಜನವರಿ 20 ರಂದು ಸಂಜೆ 4–00 ಗಂಟೆಗೆ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನವನ್ನು ಉಪಮುಖ್ಯಮಂತ್ರಿ ಡಾ ಜಿ. ಪರಮೇಶ್ವರ್ ಅವರು ನೆರವೇರಿಸಲಿದ್ದಾರೆ. ಮೇಳದ ಪ್ರವೇಶ ಉಚಿತವಾಗಿದೆ. ಎಲ್ಲರೂ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಕೃಷಿ ಆಯುಕ್ತರಾದ ಡಾ. ಕೆ. ಜಿ. ಜಗದೀಶ, ಕೃಷಿ ನಿರ್ದೇಶಕರಾದ ಬಿ.ವೈ. ಶ್ರೀನಿವಾಸ್, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕರಾದ ಸಿ. ಎನ್. ನಂದಿನಿ ಕುಮಾರಿ, ವಾರ್ತಾ ಇಲಾಖೆಯ ಜಂಟಿ ನಿರ್ದೇಶರಾದ ಎ. ಆರ್. ಪ್ರಕಾಶ್ ಅವರು ಉಪಸ್ಥಿತರಿದ್ದರು.

## ನೂತನ ಸಂಸದೀಯ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿಗಳಿಂದ ಪ್ರತಿಜ್ಞಾವಿಧಿ ಬೋಧನೆ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ನೂತನ ಸಂಸದೀಯ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಇಂದು ಅಧಿಕಾರ ಹಾಗೂ ಗೌಪ್ಯತಾ ಪ್ರಮಾಣ ವಚನ ಬೋಧಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಹಾಗೂ ವಿಧಾನಸಭೆಯ ಸದಸ್ಯರುಗಳಾದ ಕೆ. ಅಬ್ದುಲ್ ಜಬ್ಬರ್, ಐವಾನ್ ಡಿಸೋಜಾ,

ಕೆ.ಗೋವಿಂದರಾಜು, ಡಾ. ಅಂಜಲಿ ಹೇಮಂತ್ ನಿಂಬಾಳ್ಕರ್, ಕೌಜಲಗಿ ಮಹಾಂತೇಶ್ ಶಿವಾನಂದ್, ರೂಪಕಲಾ ಎಂ. ಶಶಿಧರ್, ಕೆ. ರಾಘವೇಂದ್ರ ಬಸವರಾಜ ಯತ್ನಾಳ್ ಹಾಗೂ ಬಿ.ಎಸ್. ಹೂಲಗೇರಿ ಅವರು ಸಂಸದೀಯ ಕಾರ್ಯದರ್ಶಿಗಳಾಗಿ ಮುಖ್ಯಮಂತ್ರಿಗಳಿಂದ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ನಂತರ ನೂತನ ಸಂಸದೀಯ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಪುಷ್ಪಗುಚ್ಛನೀಡಿ ಅಭಿನಂದಿಸಿದರು.

ರೇಷ್ಮೆ ಸಚಿವ ಸಾ.ರಾ. ಮಹೇಶ್, ಶಾಸಕರು ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿ ಅಧ್ಯಕ್ಷ ದಿನೇಶ್ ಗುಂಡೂರಾವ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣರೆಡ್ಡಿ, ಸಂಸದೀಯ ಕಾರ್ಯದರ್ಶಿ ದ್ವಾರಕಾನಾಥ್ ಬಾಬು ಅವರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.